ಅ) ಈ ತೀರ್ಪುಗಳಲ್ಲಿ ಭೂ ಮಾಲೀಕರ ಹಾಗೂ ಭೂ ಸಾಗುವಳಿದಾರರ ಪರವಾಗಿ ತೀರ್ಪು ನೀಡಲಾದ ಪ್ರಕರಣಗಳೆಷ್ಟು ?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ೧೯೮೫-೮೬-೮೭ ರಲ್ಲಿ

	ತಾಲ್ಲೂಕು	ಇತ್ಯರ್ಥ ಪಡಿಸಿದ್ದು	ಬಾಕಿಯಿರುವುದು
೧.	ಕುಂದಾಪುರ	೩೫೯೮	೧೨
೨.	ಉಡುಪಿ	೪೨೩೧೭	೮೩
೩.	ಕಾರ್ಕಳ	೨೧೪೫೮	೪೯
೪.	ಮಂಗಳೂರು	೪೦೭೦೨	೯೧೯
೫.	ಬಂಟ್ವಾಳ	೨೨೧೫೬	೪೭೫
೬.	ಬೆಳ್ತಂಗಡಿ	೧೫೪೩೩	೧೧
೭.	ಪುತ್ತೂರು	೧೮೯೩	೧
೮.	ಸುಳ್ಯ	೫೩೫೦	೪
	ಒಟ್ಟು	೧೯೨೭೭	೧೫೫೪

ಆ) ೧೯೮೫-೮೬-೮೭ ರಲ್ಲಿ

	ತಾಲ್ಲೂಕು	ಭೂ ಮಾಲೀಕರ ಪರ	ಭೂ ಸಾಗುವಳಿದಾರರ ಪರ
೧.	ಕುಂದಾಪುರ	೭೩೩೯	೨೬೫೮೯
೨.	ಉಡುಪಿ	೧೦೧೭೧	೩೨೧೪೬
೩.	ಕಾರ್ಕಳ	೫೩೭೫	೧೬೦೮೩
೪.	ಮಂಗಳೂರು	೧೩೭೨೦	೨೬೯೮೨
೫.	ಬಂಟ್ವಾಳ	೩೦೬೭	೧೯೮೯೯
೬.	ಬೆಳ್ತಂಗಡಿ	೨೬೩೯	೧೩೧೯೪
೭.	ಪುತ್ತೂರು	೨೬೪೮	೮೩೪೫
೮.	ಸೂಳ್ಯ	೨೧೭೧	೩೧೭೯
	ಒಟ್ಟು	೪೭೧೩೦	೧೪೫೬೦೭

ಮಂಗಳೂರು ಜನತಾ ಬಜಾರು

೧೩೧೦ (೧೩೧೫) ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ೧೯೮೪-೮೫, ೧೯೮೫-೮೬, ೧೯೮೬-೮೭ನೇ ಸಾಲಿನಲ್ಲಿ ಮಂಗಳೂರು ಜನತಾ ಬಜಾರ್ ನಲ್ಲಿ ಆದ ವಹಿವಾಟಿನ ವೊತ್ತವೆಷ್ಟು ?

ಆ) ಈ ವರ್ಷಗಳಲ್ಲಿ ಆದ ಲಾಭ ಹಾಗೂ ನಷ್ಟವೆಷ್ಟು ? (ವರ್ಷವಾರು ವಿವರ ನೀಡುವುದು)

ಇ) ಸದರಿ ಸಂಸ್ಥೆಯಲ್ಲಿ ಈ ವರ್ಷಗಳಲ್ಲಿ ಹಣ ದುರುಪಯೋಗವಾದ ಪ್ರಕರಣಗಳೆಷ್ಟು ?

ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಎಚ್. ಏಕಾಂತಯ್ಯ (ಸಹಕಾರ ಮಂತ್ರಿಗಳು).—

ಅ)

	ರೂ. (ಲಕ್ಷಗಳಲ್ಲಿ)
೧೯೮೪-೮೫	೪೧೭.೬
೧೯೮೫-೮೬	೪೯೩.೭
೧೯೮೬-೮೭	೫೧೮.೨೦

ಆ)

	ಲಾಭ	ನಷ್ಟ
೧೯೮೪-೮೫	೨.೨೩	—
೧೯೮೫-೮೬	೩.೦೯	—
೧೯೮೬-೮೭	೨.೯೫	—

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಕೃಷಿಕರ ಸಹಕಾರ ಮಾರಾಟ ಸಂಘದ ಪ್ರಗತಿಯ ಬಗ್ಗೆ

೧೩೧೧ (೨೨೧೧) ಶ್ರೀ ಬಿ. ಎಂ. ಇದಿನಬ್ಬ. (ಉಳ್ಳಾಲ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ೧೯೮೫-೮೬, ೧೯೮೬-೮೭ ಮತ್ತು ೧೯೮೭-೮೮ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಕೃಷಿಕರ ಸಹಕಾರ ಮಾರಾಟದ ವ್ಯಾಪಾರ ವಹಿವಾಟು ಎಷ್ಟು ? ಮತ್ತು ಅದರ ಶಾಖೆಗಳ ಸಂಖ್ಯೆ ಎಷ್ಟು ? (ವರ್ಷವಾರು, ಶಾಖಾವಾರು ಪ್ರತ್ಯೇಕ ವಿವರ ನೀಡುವುದು)

ಆ) ಈ ಸಂಘವು ಸದರಿ ಸಾಲಿನಲ್ಲಿ ಗಳಿಸಿದ ಲಾಭವೆಷ್ಟು ? ಮತ್ತು ಅನುಭವಿಸಿದ ನಷ್ಟ ವೆಷ್ಟು ? (ವರ್ಷವಾರು, ಶಾಖಾವಾರು ಪ್ರತ್ಯೇಕ ವಿವರ ನೀಡುವುದು)

ಇ) ಸದರಿ ಸಾಲಿನಲ್ಲಿ ಈ ಸಂಘದಲ್ಲಿ ಹಣದ ದುರುಪಯೋಗ ಶೇಖರಿಸಿದ ಮಾಲಿನ ತಪಾಸಣೆ ಮತ್ತು ತೀರ್ಮಾನವಾಗಿದೆಯೇ ?

ಶ್ರೀ ಹೆಚ್. ಏಕಾಂತಯ್ಯ (ಸಹಕಾರ ಮಂತ್ರಿಗಳು).—

ಅ) ದಕ್ಷಿಣ ಕನ್ನಡ ಕೃಷಿಕರ ಸಹಕಾರ ಮಾರಾಟದ ವ್ಯಾಪಾರ ವಹಿವಾಟುಗಳ ವಿವರಗಳು ಈ ಕೆಳಗಿನಂತೆ ಇರುತ್ತದೆ.

ಸಾಲು	ಮೊಬಲಗು (ರೂ. ಲಕ್ಷಗಳಲ್ಲಿ)
೧೯೮೫-೮೬	೨೩೧೮. ೮೪
೧೯೮೬-೮೭	೧೮೦೬. ೬೧
೧೯೮೭-೮೮	೮೧೫. ೪೫
೧-೧೧-೮೭ರಿಂದ ೩೦-೪-೮೮ರವರೆಗೆ ಸಂಘದ ಶಾಖೆಗಳ ಸಂಖ್ಯೆ-೩ (ಪುತ್ತೂರು, ಸೂಳ್ಯ ಮತ್ತು ಬೆಳ್ತಂಗಡಿ)	

	ವರ್ಷವಾರು, ಶಾಖಾವಾರು ವಹಿವಾಟು ವಿವರಗಳು		
	೧೯೮೫-೮೬	೧೯೮೬-೮೭	೧೯೮೭-೮೮ (೧-೧೧-೮೭ ರಿಂದ ೩೦-೪-೮೮ ವರೆಗೆ)
ಮುಖ್ಯ ಕಛೇರಿ	೧೯೨೦. ೦೮	೧೨೭೪. ೬೭	೭೪೮. ೯೦
ಪುತ್ತೂರು ಶಾಖೆ	೩೯೮. ೭೬	೫೩೧. ೯೪	೬೬. ೫೫
ಸೂಳ್ಯ ಶಾಖೆ	ವಾರಾಟ ವ್ಯವಹಾರವಿರುವುದಿಲ್ಲ.		
ಬೆಳ್ತಂಗಡಿ ಶಾಖೆ	-"-		
ಒಟ್ಟು ವಹಿವಾಟು	೨೩೧೮. ೮೪	೧೮೦೬. ೬೧	೮೧೫. ೪೫